**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ನಂಃ 75/2023**

ಸಾಕ್ಷಿದಾರರ ಹೆಸರು - ರೋಷನ್ ಪಿಡಬ್ಲೂ - 04
ತಂದೆಯ ಹೆಸರು - ಸುರೇಶ್ ಸಿಡಬ್ಲೂ - 07
ವಯಸ್ಸು - 23 ವರ್ಷ
ಉದ್ಯೋಗ - ಚಾಲಕ
ವಾಸ ಸ್ಥಳ - ಬಾಳೆಹೊನ್ನೂರು

ದಿನಾಂಕಃ 08.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ **Google meet** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ರವಿ ಗೊತ್ತು. ಆತ ನಮ್ಮ ಊರಿನವರು. ಪ್ರಾಸಾ.1 ಗೊತ್ತು, ಅವರು ಮೃತನ ಹೆಂಡತಿ. ಪ್ರಾಸಾ.2 ಮತ್ತು ಚಾಸಾ.6 ರವರು ಗೊತ್ತು, ಅವರು ಮೃತ ಮತ್ತು ಪ್ರಾಸಾ.1 ರವರ ಮಕ್ಕಳು. ಪ್ರಾಸಾ.3 ಮತ್ತು ಚಾಸಾ.8 ರವರು ಗೊತ್ತು. ಈ ದಿನ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿ ಗೊತ್ತು, ಆತ ಪ್ರಾಸಾ.1 ರವರ ಅಣ್ಣ.

2. ಈಗ್ಗೆ 2 ವರೆ ವರ್ಷಗಳ ಹಿಂದೆ ಒಂದು ದಿನ ನಾನು ನಮ್ಮ ಮನೆಯಲ್ಲಿದ್ದೆನು. ಆಗ ಸಂಜೆ ಹೊತ್ತಿಗೆ ರವಿರವರನ್ನು ಆರೋಪಿ ಗುದ್ದಲಿಯಿಂದ ಹೊಡೆದು ಕೊಲೆ ಮಾಡಿದ ವಿಚಾರ ತಿಳಿಯಿತು. ವಿಷಯ ತಿಳಿದ ಕೂಡಲೇ ನಾನು ರವಿರವರ ಮನೆಯ ಹತ್ತಿರ ಹೋದೆನು. ಅವರ ಮನೆಯ ಮುಂದೆ ರಸ್ತೆ ಪಕ್ಕದಲ್ಲಿ ರವಿರವರು ಬಿದ್ದಿದ್ದು, ಅವರ ಮುಖ, ತಲೆ ಮತ್ತು ಕುತ್ತಿಗೆಯ ಹತ್ತಿರ ಕಡಿದ ಗಾಯವಾಗಿ ರಕ್ತ ಬರುತ್ತಿತ್ತು. ನಾನು ನೋಡಿದಾಗ ಆರೋಪಿ ಫ್ರಾಸಾ.1 ರವರ ಮನೆಯ ಮುಂದೆ ತನ್ನ ಕೈಯಲ್ಲಿ ಗುದ್ದಲಿಯನ್ನು ಹಿಡಿದುಕೊಂಡು ನಿಂತಿದ್ದನು.

3. ನಂತರ ರವಿರವರನ್ನು ಆಂಬ್ಯುಲೇನ್ಸಿನಲ್ಲಿ ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಕೂಡ ಸದರಿ ಆಸ್ಪತ್ರೆಗೆ ಹೋದೆನು. ಅಲ್ಲಿ ನಾನು ಫ್ರಾಸಾ.1 ರವರನ್ನು ಏನಾಯಿತು ಎಂದು ಕೇಳಿದಾಗ, ಆರೋಪಿ ಆಗ್ಗೆ ಸುಮಾರು ದಿನಗಳಿಂದ ಅವರ ಮನೆಯಲ್ಲೇ ಉಳಿದುಕೊಂಡಿದ್ದಾಗಿ, ರವಿರವರು ಆತನನ್ನು ಕುರಿತು ಮನೆ ಬಿಟ್ಟು ಹೋಗು ಎಂದು ಹೇಳಿದರೂ ಸಹ ಆತ ಹೋಗದೇ ಅಲ್ಲೇ ಇದ್ದುದ್ದಾಗಿ, ಆ ದಿನ ಮಧ್ಯಾಹ್ನ 3.30 ಗಂಟೆ ಸುಮಾರಿಗೆ ರವಿರವರು ಕೆಲಸ ಮುಗಿಸಿ ಮನೆಗೆ ಬಂದಾಗ ಆರೋಪಿ ಅವರ ಮನೆಯಲ್ಲೇ ಇದ್ದುದ್ದನ್ನು ಕಂಡು ಇನ್ನೂ ಯಾಕೆ ಮನೆ ಬಿಟ್ಟು ಹೋಗಿಲ್ಲ ಎಂದು ಕೇಳಿದ್ದಾಗ ಆರೋಪಿ ಅವರೊಂದಿಗೆ ಜಗಳ ಮಾಡಿ ಗುದ್ದಲಿಯಿಂದ ಆತನ ಮೇಲೆ ಹಲ್ಲೆ ಮಾಡಿದ್ದಾಗಿ ತಿಳಿಸಿದರು.

4. ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು ರವಿರವರಿಗೆ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದ್ದರಿಂದ ನಾನು, ಫ್ರಾಸಾ.1

ಮತ್ತು ಅವರ ಮಗನಾದ ಪ್ರಾಸಾ.2 ರವರು ರವಿರವರನ್ನು ಅದೇ ದಿನ ಮಂಗಳೂರಿನ ವೆನಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಅದೇ ದಿನ ರಾತ್ರಿ ರವಿರವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟರು.

5. ನಂತರ ಬಾಳೆಹೊನ್ನೂರು ಪೊಲೀಸರು ವೆನಲಾಕ್ ಆಸ್ಪತ್ರೆಯ ಶವಗಾರಕ್ಕೆ ಬಂದು ಅಲ್ಲಿ ಇರಿಸಿದ್ದ ರವಿರವರ ಶವವನ್ನು ಪರಿಶೀಲಿಸಿದರು. ಆ ಸಮಯದಲ್ಲಿ ನಾನು ಹಾಜರಿದ್ದೆನು. ಅಲ್ಲಿ ಪೊಲೀಸರು ನನ್ನನ್ನು ವಿಚಾರಿಸಿದರು, ಆಗ ನಾನು ಅವರಿಗೆ ಮೇಲೆ ಹೇಳಿದ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೇನೆ. ಸಾಕ್ಷಿಗೆ ಈಗಾಗಲೇ ನಿಪಿ.9 ರಿಂದ ಪಿ.17 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ರವಿರವರ ಶವ ಮತ್ತು ಅವರಿಗೆ ಆದ ಗಾಯಗಳು ಕಂಡುಬರುವುದಾಗಿ ನುಡಿದಿರುತ್ತಾರೆ.

6. ರವಿರವರು ಮೃತಪಟ್ಟ ಮಾರನೆ ದಿನ ಪೊಲೀಸರು ಆರೋಪಿ ರವಿರವರ ಮೇಲೆ ಹಲ್ಲೆ ಮಾಡಿದ್ದ ಸ್ಥಳಕ್ಕೆ ಬಂದರು. ಆ ಸಮಯದಲ್ಲಿ ನಾನು, ಪ್ರಾಸಾ.1 ಮತ್ತು ಚಾಸಾ.8 ಅರುಣ್ ವೇಗಸ್ ರವರು ಅಲ್ಲಿ ಹಾಜರಿದ್ದರು. ಸ್ಥಳದಲ್ಲಿ ಮಹಜರನ್ನು ಜರುಗಿಸಲು ಸಹಕರಿಸುವಂತೆ ಪೊಲೀಸರು ನನಗೆ ಮತ್ತು ಚಾಸಾ.8 ರವರಿಗೆ ನೋಟೀಸನ್ನು ಕೊಟ್ಟರು. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಟೀಸನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ನೋಟೀಸನ್ನು ನಿಪಿ.29 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.29(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಹಾಜರಿದ್ದ ಪ್ರಾಸಾ.1 ರವರು ಆರೋಪಿ ಕೃತ್ಯ ಎಸಗಿದ್ದ ಸ್ಥಳವನ್ನು ಪೊಲೀಸರಿಗೆ ತೋರಿಸಿದರು. ಆ ಸಮಯದಲ್ಲಿ ಪೊಲೀಸರು ಕೃತ್ಯ ನಡೆದ ಸ್ಥಳದಲ್ಲಿ ಟಾರ್ ರಸ್ತೆಯ

ಮೇಲೆ ಇದ್ದ ರಕ್ತದ ಕಲೆಗಳನ್ನು ಕೆರೆದು ಸಂಗ್ರಹಿಸಿಕೊಂಡರು ಮತ್ತು ಸ್ಥಳದಲ್ಲಿದ್ದ ಒಂದು ಗುದ್ದಲಿಯನ್ನು ಫ್ರಾಸಾ.1 ರವರು ಪೊಲೀಸರಿಗೆ ಹಾಜರುಪಡಿಸಿ ಅದರಿಂದ ಆರೋಪಿ ತನ್ನ ಗಂಡನ ಮೇಲೆ ಹಲ್ಲೆ ಮಾಡಿದ್ದಾಗಿ ತಿಳಿಸಿದ್ದು, ಅದನ್ನು ಪೊಲೀಸರು ತಮ್ಮ ವಶಕ್ಕೆ ಪಡೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಒಂದು ಪ್ಲಾಸ್ಟಿಕ್ ಕವರ್ ನಲ್ಲಿ ಇದ್ದ ಪುಡಿಯನ್ನು ಸಾಕ್ಷಿಯು ನೋಡಿ ಆ ದಿನ ಪೊಲೀಸರು ಸಂಗ್ರಹಿಸಿದ ರಕ್ತದ ಕಲೆ ಇರುವ ಟಾರು ರಸ್ತೆಯ ಪುಡಿ ಅದೇ ಎಂದು ನುಡಿದಿರುತ್ತಾರೆ. ಸದರಿ ಪುಡಿಯನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಒಂದು ಮರದ ಹಿಡಿ ಇರುವ ಕಬ್ಬಿಣದ ಗುದ್ದಲಿಯನ್ನು ನೋಡಿ ಆರೋಪಿ ರವಿರವರನ್ನು ಕಡಿಯಲು ಉಪಯೋಗಿಸಿದ್ದ ಗುದ್ದಲಿ ಅದೇ ಎಂದು ನುಡಿದ ಮೇರೆಗೆ ಅದನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿರುತ್ತದೆ. ಆ ಬಗ್ಗೆ ಪೊಲೀಸರು ಸ್ಥಳದಲ್ಲಿ ಮಹಜರನ್ನು ಬರೆದುಕೊಂಡರು. ಸದರಿ ಮಹಜರನ್ನು ಪೊಲೀಸರು ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ ಬರೆದುಕೊಂಡಿದ್ದಾರೆ. ಅದಕ್ಕೆ ನಾನು, ಫ್ರಾಸಾ.1 ಮತ್ತು ಚಾಸಾ.8 ರವರು ಸಹಿ ಮಾಡಿದೆವು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡರು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗಾಗಲೇ ನಿಪಿ. 3 ರಿಂದ 8 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ತೋರಿಸಲಾಗಿ, ಅವುಗಳಲ್ಲಿ

ತನ್ನ ಇರುವಿಕೆಯನ್ನು ಗುರುತಿಸಿ ಅವುಗಳನ್ನು ಪೊಲೀಸರು ಮೇಲೆ ಹೇಳಿದಂತೆ ಘಟನಾ ಸ್ಥಳದಲ್ಲಿ ಮಹಜರ್ ಜರುಗಿಸುವ ಸಮಯದಲ್ಲಿ ತೆಗೆದಿದ್ದಾಗಿ ನುಡಿದಿರುತ್ತಾರೆ. ಸಾಕ್ಷಿಗೆ ಮತ್ತೊಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ ಅದನ್ನು ಸಹ ಮೇಲೆ ಹೇಳಿದಂತೆ ಘಟನಾ ಸ್ಥಳದಲ್ಲಿ ಮಹಜರ್ ಜರುಗಿಸುವ ಸಮಯದಲ್ಲಿ ಪೊಲೀಸರು ತೆಗೆದಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.30 ಎಂದು ಗುರುತಿಸಲಾಯಿತು. ಮೇಲೆ ಗುರುತಿಸಿದ ಫೋಟೋಗಳಲ್ಲಿ ನನ್ನೊಂದಿಗೆ ಫ್ರಾಸಾ.1, ಚಾಸಾ.8 ಮತ್ತು ಪೊಲೀಸರ ಇರುವಿಕೆ ಕಂಡುಬರುತ್ತದೆ.

7. ಆದಾದ ಒಂದು ವಾರದ ಬಳಿಕ ಪೊಲೀಸರು ನನಗೆ ಮತ್ತು ಫ್ರಾಸಾ.3 ರವರಿಗೆ ನೋಟೀಸನ್ನು ಕೊಟ್ಟು ಮಹಜರ್ ಜರುಗಿಸಲು ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಬರುವಂತೆ ಕರೆದಿದ್ದರು. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಟೀಸನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.20 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.20(ಬಿ) ಎಂದು ಗುರುತಿಸಲಾಯಿತು. ಪೊಲೀಸರು ನೋಟೀಸನ್ನು ಕೊಟ್ಟ ಮೇರೆಗೆ ನಾನು ಮತ್ತು ಫ್ರಾಸಾ.3 ರವರು ಬಾಳೆಹೊನ್ನೂರು ಪೊಲೀಸ್ ಠಾಣೆಗೆ ಹೋಗಿದ್ದೆವು. ಅಲ್ಲಿ ಆರೋಪಿ ಪೊಲೀಸರ ವಶದಲ್ಲಿದ್ದನು. ಆರೋಪಿ ಆ ಸಮಯದಲ್ಲಿ ತಾನು ಧರಿಸಿದ್ದ ಒಂದು ತುಂಬು ತೋಳಿನ ಬಿಳಿ, ನೀಲಿ, ಹಸಿರು ಬಣ್ಣಗಳ ಮಿಶ್ರಿತ ಚೆಕ್ಸ ಶರ್ಟು ಮತ್ತು ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟನ್ನು ತಾನು ಕೃತ್ಯವಸೆಗಿದ್ದ ಸಮಯದಲ್ಲಿ ಧರಿಸಿದ್ದಾಗಿ ತಿಳಿಸಿದನು, ಅವುಗಳ ಮೇಲೆ ರಕ್ತದ ಕಲೆಗಳಾಗಿದ್ದವು. ಆರೋಪಿಯ ಬಟ್ಟೆಗಳು ಫ್ರಾಸಾ.1

ರವರ ಮನೆಯಲ್ಲಿ ಇದ್ದ ಕಾರಣ ಪೊಲೀಸರು ಪ್ರಾಸಾ.1 ರವರ ಮನೆಯಿಂದ ಆತನಿಗೆ ತೊಡಲು ಬೇರೆ ಬಟ್ಟೆಗಳನ್ನು ತರಿಸಿ ಅವುಗಳನ್ನು ಆರೋಪಿಗೆ ಕೊಟ್ಟರು. ಆರೋಪಿ ತಾನು ಮೇಲೆ ಹೇಳಿದಂತೆ ಧರಿಸಿದ್ದ ಶರ್ಟು ಮತ್ತು ಪ್ಯಾಂಟನ್ನು ಬದಲಿಸಿ ಅವುಗಳನ್ನು ನಮ್ಮ ಸಮಕ್ಷಮ ಪೊಲೀಸರಿಗೆ ಹಾಜರು ಪಡಿಸಿದರು. ಅವುಗಳನ್ನು ಪೊಲೀಸರು ಒಂದು ಕವರಿನಲ್ಲಿ ಹಾಕಿ ಅವುಗಳ ಮೇಲೆ ನಮ್ಮ ಸಹಿಗಳನ್ನು ಪಡೆದುಕೊಂಡು ತಮ್ಮ ವಶಕ್ಕೆ ತೆಗೆದುಕೊಂಡರು. ಆ ಬಗ್ಗೆ ಪೊಲೀಸರು ಸಂಜೆ 5 ಗಂಟೆಯಿಂದ 6 ಗಂಟೆಯವರೆಗೆ ಮಹಜರನ್ನು ಬರೆದುಕೊಂಡರು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮಹಜರನ್ನು  ಈಗಾಗಲೇ ನಿಪಿ.21 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು  ನಿಪಿ.21(ಬಿ) ಎಂದು ಗುರುತಿಸಲಾಯಿತು. ಸದರಿ ಮಹಜರಿಗೆ ನಾನು ಮತ್ತು ಪ್ರಾಸಾ.3 ರವರು ಸಹಿ ಮಾಡಿದೆವು ಮತ್ತು ಆರೋಪಿ ಸಹ ಅದಕ್ಕೆ ಸಹಿ ಮಾಡಿದನು.  ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ.22 ಮತ್ತು ಪಿ.23 ಎಂದು ಗುರುತಿಸಲಾಗಿರುತ್ತದೆ. ಸದರಿ ಫೋಟೋಗಳನ್ನು ಪೊಲೀಸರು ಮೇಲೆ ಹೇಳಿದಂತೆ ಆರೋಪಿ ತಾನು ಧರಿಸಿದ್ದ ಬಟ್ಟೆಗಳನ್ನು ಹಾಜರು ಪಡಿಸುವ ಸಮಯದಲ್ಲಿ ಪೊಲೀಸರು ತೆಗೆದುಕೊಂಡರು. ಸದರಿ ಫೋಟೋಗಳಲ್ಲಿ ನನ್ನ, ಪ್ರಾಸಾ.3, ಆರೋಪಿ ಮತ್ತು ಪೊಲೀಸರ ಇರುವಿಕೆ ಕಂಡುಬರುತ್ತದೆ.

8. ಆ ದಿನ ಆರೋಪಿ ಹಾಜರು ಪಡಿಸಿದ ಶರ್ಟು ಮತ್ತು ಪ್ಯಾಂಟನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ಬಿಳಿ, ನೀಲಿ, ಹಸಿರು ಮಿಶ್ರಿತ ಬಣ್ಣದ ಚೌಕಳಿ ಇರುವ ತುಂಬು ತೋಳಿನ ಶರ್ಟನ್ನು ಮತ್ತು ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿ ಆ ದಿನ ಆರೋಪಿ ಧರಿಸಿದ್ದ ಮತ್ತು ಪೊಲೀಸರಿಗೆ ಹಾಜರು ಪಡಿಸಿದ ಬಟ್ಟೆಗಳು ಅವೇ ಎಂದು ನುಡಿದಿರುತ್ತಾರೆ. ಸದರಿ ಶರ್ಟು ಮತ್ತು ಪ್ಯಾಂಟನ್ನು ಈಗಾಗಲೇ ಮು.ಮಾ.3 ಮತ್ತು ಮು.ಮಾ.4 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಮು.ಮಾ.1 ರಿಂದ ಮು.ಮಾ.4 ರ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.1(ಎ), ಮು.ಮಾ.2(ಎ), ಮು.ಮಾ.3(ಬಿ) ಮತ್ತು ಮು.ಮಾ.4(ಬಿ) ಎಂದು ಗುರುತಿಸಲಾಯಿತು.

9. ಅದೇ ದಿನ ಮೇಲೆ ಹೇಳಿದಂತೆ ಆರೋಪಿಯ ಬಟ್ಟೆಗಳನ್ನು ಪೊಲೀಸರು ಅಮಾನತು ಪಡಿಸಿಕೊಂಡ ಬಳಿಕ ಆರೋಪಿ ನನ್ನನ್ನು, ಫ್ರಾಸಾ.3 ಮತ್ತು ಪೊಲೀಸರನ್ನು ಫ್ರಾಸಾ.1 ರವರ ಮನೆಯ ಮುಂಭಾಗದಲ್ಲಿರುವ ಎನ್.ಆರ್.ಪುರದಿಂದ ಬಾಳೆಹೊನ್ನೂರಿಗೆ ಹೋಗುವ ರಸ್ತೆಯಲ್ಲಿ ಕೃತ್ಯ ನಡೆದಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ತಾನು ರವಿರವರಿಗೆ ಗುದ್ದಲಿಯಿಂದ ಹೊಡೆದು ಕೊಲೆ ಮಾಡಿದೆನು ಎಂದು ತಿಳಿಸಿ ಜಾಗವನ್ನು ತೋರಿಸಿದನು. ಅಲ್ಲಿ ಪೊಲೀಸರು ಸಂಜೆ 6 ಗಂಟೆಯಿಂದ 7 ಗಂಟೆಯವರೆಗೆ ಮಹಜರ್ ಬರೆದುಕೊಂಡರು ಮತ್ತು ಫೋಟೋಗಳನ್ನು ತೆಗೆದುಕೊಂಡರು. ಸದರಿ ಮಹಜರಿಗೆ ನಾನು, ಫ್ರಾಸಾ.3 ಮತ್ತು ಆರೋಪಿ ಸಹಿ ಮಾಡಿದೆವು. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಮಹಜರನ್ನು ಈಗಾಗಲೇ ನಿಪಿ.24 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.24(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ 4 ಫೋಟೋಗಳನ್ನು ತೋರಿಸಲಾಗಿ ಅವುಗಳನ್ನು ಮೇಲೆ ಹೇಳಿದಂತೆ ಆರೋಪಿ ಕೃತ್ಯವೆಸಗಿದ್ದ ಸ್ಥಳವನ್ನು ತೋರಿಸಿದ ಸಮಯದಲ್ಲಿ ಪೊಲೀಸರು ತೆಗೆದಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ.25 ರಿಂದ ಪಿ.28 ಎಂದು ಗುರುತಿಸಲಾಗಿರುತ್ತದೆ. ಸದರಿ ಫೋಟೋಗಳಲ್ಲಿ ನನ್ನೊಂದಿಗೆ ಫ್ರಾಸಾ.3, ಆರೋಪಿ ಮತ್ತು ಪೊಲೀಸರ ಇರುವಿಕೆ ಕಂಡುಬರುತ್ತದೆ.

<u>ಪಾಟೀ ಸವಾಲುಃ</u>

(ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೋರಿದ ಮೇರೆಗೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ